ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಸರ್ಕಾರದ ಕೆಲಸ ದೇವರ ಕೆಲಸ. ಈ ಬರಹ ಸರಕಾರಿ ದವಾಖಾನೆಯ ಮುಂದೆ ಏಕಿಲ್ಲ?



ಕೊರೊನಾ ಕಾಲದಲ್ಲಿನ ವೈದ್ಯರ ಸೇವೆ ದೈವಿಕತೆಗಿಂತಲೂ ಉತ್ಕೃಷ್ಟವಾಗಿರುವುದರಿಂದ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

ಮರ್ಯಾದೆ ಮಹಲ್ ಕಟ್ಟುವವರು ಕಡಿಮೆಯಾಗುತ್ತಿದ್ದಾರಲ್ಲಾ...?

ಹಣ ಗಳಿಸುವತ್ತ ಮನ ನೆಟ್ಟ ಜನ ಮರ್ಯಾದೆ ಗಳಿಸುವುದನ್ನು ಮರೆಯುತ್ತಿರುವ ಪರಿಣಾಮ.

ಎ.ಕೆ. ಪಟ್ಟಾಭಿ, ಬೆಂಗಳೂರು

ಮನೆಗೆ ಹಾವು ನುಗ್ಗಿದಾಗ ಬೇಗ ಗಂಡಸರನ್ನು ಕರಿ ಎಂದು ಗಂಡ ಹೆಂಡತಿಗೆ ಹೇಳಿದನಂತಲ್ಲಾ?

ಪಾಪ! ಗಂಡ ತಾನು ಗಂಡಸು ಎಂಬುದನ್ನೇ ಮರೆಯುವಷ್ಟು ಹೆನ್‌ಪೆಕ್ಡಿಸಿದ್ದಾಳೆ ಹೆಂಡತಿ!

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಸುಂದರವಾಗಿರುವವರೆಲ್ಲ ಗುಣವಂತರಲ್ಲ. ಆದರೆ ಗುಣವಂತರು ಸುಂದರವಾಗಿರುತ್ತಾರೆ ಅಲ್ಲವೆ?



ಹನುಮಂತನನ್ನು ಸುಂದರಮೂರುತಿ ಎನ್ನಲು ನಿಮ್ಮ ವಾದವೇ ತಳಹದಿ.

ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು

ಆತ್ಮ, ಪರಮಾತ್ಮ ಎನ್ನುತ್ತಾರೆ ಜ್ಞಾನಿಗಳು. ಪರಮಾತ್ಮನನ್ನು ನಂಬದವರ ಆತ್ಮಕ್ಕೆ ಏನೆನ್ನಬೇಕು?

ಜೀವಾತ್ಮ ಎನ್ನಿ! ಜಗದ ಕೋಟ್ಯಂತರ ಜೀವಿಗಳು ತತ್ವಜ್ಞಾನ ಅರಿಯದೆಯೂ ಜೀವಿಸುತ್ತವೆ.

ಪಿ. ಜಯವಂತ ಪೈ, ಕುಂದಾಪುರ

ಲಕ್ಷಾಂತರ ಧನಿಕರು ಬಿಪಿಎಲ್ ಕಾರ್ಡ್ ಹೊಂದಿದ್ದಾರಂತಲ್ಲಾ...?

ತಿಳಿಯಿತಲ್ಲ! ಹಣದಿಂದ ಧನಿಕರಾದ ಅವರು ಗುಣದಿಂದ ಕೀಳು ಭಿಕ್ಷುಕರು.

ಕಾವ್ಯಶ್ರೀ ಪತ್ರಿಮಠ, ಸುರಪುರ

ಅತ್ತೆಗೆ ಒಂದು ಕಾಲ; ಸೊಸೆಗೆ ಒಂದು ಕಾಲ; ಮಾವನಿಗೆ?

ಅವನದೂ ಒಂದು ಕಾಲ ಇತ್ತಂತೆ, ಅತ್ತೆಯನ್ನು ವರಿಸುವುದಕ್ಕೆ ಮುಂಚೆ.

ಆರ್. ಮಧುಸೂದನ್, ಹಾಸನ

ಕಣ್ಣಿಗೆ ಬಟ್ಟೆ ಕಟ್ಟಿಕೊಳ್ಳದಿದ್ದರೆ ಗಾಂಧಾರಿ ದುರ್ಯೋಧನನನ್ನು ಒಳ್ಳೆಯ ಮಗನನ್ನಾಗಿ ಮಾಡಬಹುದಿತ್ತಲ್ಲವೆ?

ಕಿವಿಗೆ ಕಟ್ಟಿಕೊಂಡಿರಲಿಲ್ಲವಲ್ಲ. ಸುದ್ದಿಯ ಸದ್ದಿಗೆ ಕಿವುಡಾದ್ದರಿಂದಲೇ ಸುತ ಕೆಟ್ಟ.

ವ. ಉಮೇಶ ಕಾರಂತ, ಮಂಗಳೂರು

ಹುಟ್ಟುವಾಗಿಲ್ಲದ, ಸಾಯುವಾಗಿಲ್ಲದ ಜಾತಿ ನಮಗೆ ಬೇಕೆ?

ಹೊಸ್ತಿಲೊಳಗಿದ್ದರೆ ತೊಂದರೆಯಿಲ್ಲ. ಹೊರಗಡೆ ಇರಲೇಬಾರದಾದ ವಿಷವದು.

ವಿ. ಹೇಮಂತಕುಮಾರ್, ಬೆಂಗಳೂರು

ತಿರುಪತಿಗೆ ಹೋದವರು ಗುಂಡು ಹೊಡೆಸಿಕೊಳ್ಳಲೇಬೇಕಾ ಸಾರ್?

ಹಾಗೇನಿಲ್ಲ. ಯೆಸ್ ಬ್ಯಾಂಕ್‌ನಂತಹದ್ದರಲ್ಲಿ ಹಣವಿಟ್ಟು ಇಲ್ಲೇ ತಿರುಪತಿ ಆಗಬಹುದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

ಹೆಣ್ಣು, ಹೊನ್ನು, ಮಣ್ಣು ಸಹಜವಾಗಿ ದೊರೆಯಲು ಏನು ಮಾಡಬೇಕು?

ಆರ್ಟ್ ಆಫ್ ಲಿವಿಂಗ್ ಕಲಿಯಬೇಕು.

ಎಂ.ಎ. ಕುಮಾರ್, ಬೆಂಗಳೂರು

ಹೆಂಗಸರಿಗೆ ತಲೆಗೂದಲಿದ್ದರೇನೇ ಚೆನ್ನ. ಗಂಡಸರು ಬೋಳುತಲೆಯಲ್ಲೂ ಸುಂದರವಾಗಿ ಕಾಣುತ್ತಾರೆ. ಕಾರಣ?

ತಾರುಣ್ಯದಿಂದಲೇ ಚೆನ್ನಾಗಿ ಬೋಳಿಸಿಕೊಳ್ಳುವುದರಿಂದ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಉತ್ತರವಿಲ್ಲದ ಪ್ರಶ್ನೆ ಯಾವುದು?

ಭೈರಿಗೆಯವರ ಕೈಗೆ ಸಿಲುಕಿ ನಾನ್ಯಾಕಾದ್ರೂ ಇಲ್ಲಿಗೆ ಬಂದೆನೋ? ಎಂದು ಕೇಳಿಕೊಳ್ಳುವ ಪ್ರಶ್ನೆ.

## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು

ಹೆಂಗಸರೇಕೆ ಸಣ್ಣಪುಟ್ಟದ್ದಕ್ಕೂ ನಗುತ್ತಾರೆ?

ಚಿನ್ನ, ಬೆಳ್ಳಿಗಳಲ್ಲಿ ಪಳಗಿದ ಅವರಿಗೆ ಸಣ್ಣಪುಟ್ಟವುಗಳ ಬೆಲೆ ತಿಳಿದಿರುತ್ತದೆ.

ಟಿ.ಆರ್. ರವೀಂದ್ರ, ಬೆಂಗಳೂರು

ಸೌಂದರ್ಯ ಪ್ರದರ್ಶನದ ಹೆಸರಲ್ಲಿ ದೇಹ ಪ್ರದರ್ಶಿಸುವ ಹೆಣ್ಣುಗಳಿಗೆ ಎಂದು ಬುದ್ಧಿ ಬರುತ್ತದೆ?

ದೇಹ ಪ್ರದರ್ಶನವನ್ನು ಕಾಣಲು ಕಾತರಿಸುವ ಗಂಡುಗಳು ಇಲ್ಲವಾದಾಗ.

ದ್ವಾರಕಾನಾಥ್, ಬೆಂಗಳೂರು

ಹೆಣ್ಣು ತವರನ್ನು ಹೆಮ್ಮೆಯಿಂದ, ಮಕ್ಕಳನ್ನು ಮುದ್ದಿನಿಂದ, ಆದರೆ ಪತಿಯನ್ನು ಜಿದ್ದಿನಿಂದ ನೋಡುವುದೇಕೆ?

ತವರು ಜನ್ಮ ಕೊಟ್ಟವರು; ಮಕ್ಕಳು ಜನ್ಮ ಪಡೆದವರು; ಪತಿ ಜನ್ಮ ಜಾಲಾಡುವವನು ಎಂದಳಾಕೆ.

ಕೆ.ಎಂ. ವಿಭೂತಿ, ಹರಿಹರ

ತಂತ್ರಜ್ಞಾನದ ಯುಗದಲ್ಲೂ ಯುವಜನಾಂಗ ಆದಿಮಾನವನ ಕೇಶವಿನ್ಯಾಸ ಹೊಂದುವ ಕಾರಣವೇನು?



ಆ ಕಾಲದ್ದೇ ಆದ ತುಂಡು, ತೂತು ಬಟ್ಟೆಗಳಿಗೆ ಮ್ಯಾಚ್ ಆಗಲೆಂದು.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಅರಮನೆಯಂತಹ ಮನೆ ಕಟ್ಟಿದರೂ ದೇವರಮನೆ ಚಿಕ್ಕದಾಗಿರಲು ಕಾರಣ?

ಲೆಕ್ಕ ಸರಿಯಿದೆ! ಆರಡಿ ನರನಿಗೆ ಹನ್ನೆರಡಡಿ ರೂಮು, ಎರಡಡಿ ದೇವನಿಗೆ ನಾಲ್ಕಡಿಯದು.

ಎಂ. ಮೃತ್ಯುಂಜಯಪ್ಪ, ಚಿತ್ರದುರ್ಗ

ವಿಷವುಣಿಸುವ ಹಾವಿಗೆ ಹಾಲೆರೆದು ಹಾಲು ಕೊಡುವ ಹಸುವನ್ನು ಬೀದಿಗಟ್ಟುವುದು ಯಾವ ನ್ಯಾಯ?

ರೌಡಿಗೆ ಹಫ್ತಾ ಕೊಟ್ಟು ಬಡವನಿಗೆ ಟೋಪಿ ಹಾಕುವ ವ್ಯಾಪಾರೀ ನ್ಯಾಯ.

ಪ್ರಶ್ನೆ ಕಳಿಸಲು: **editorsu@sudha.co.in**

■ **ರಾಮ್**